ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು	ಶ್ರೀ ಆರ್. ಬಿ. ತಿಮ್ಮಾಪೂರ (ವಿಧಾನಸಭೆಯಿಂದ ಚುನಾಯಿತರಾದವರು)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	733 (801)
ಉತ್ತರಿಸಬೇಕಾದ ದಿನಾಂಕ	09-03-2021
ಉತ್ತರಿಸಬೇಕಾದ ಸಚಿವರು	ನಗರಾಭಿವೃದ್ಧಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ಮುಧೋಳ ನಗರಕ್ಕೆ 24X7 ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಯೋಜನೆಗಳಾವುವು;	ಬಾಗಲಕೋಟೆ ಜಿಲ್ಲೆಯ ಮುಧೋಳ ನಗರಕ್ಕೆ ರೂ.170.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕಡಿಯುವ ನೀರನ್ನು ಸರಬರಾಜು ಮಾಡಲು ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.
(ಆ)	ಯಾವ ಯಾವ ಮೂಲಗಳಿಂದ ಮುಧೋಳ ನಗರಕ್ಕೆ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ;	ಪ್ರಸ್ತುತ ಮುಧೋಳ ನಗರಕ್ಕೆ ಘಟಪ್ರಭಾ ನದಿಗೆ ಉತ್ತೂರು ಜಾಲಿಬೇರಿ ಬಳಿ ನಿರ್ಮಿಸಿರುವ ಬ್ಯಾರೇಜ್ ನಿಂದ ಮತ್ತು ಕೊಳವೆ ಬಾವಿಗಳಿಂದ ನೀರನ್ನು ಪೂರೈಸಲಾಗುತ್ತಿದೆ.
(ಇ)	ಮುಧೋಳ ನಗರಕ್ಕೆ ಪ್ರತಿ ದಿನ ಅವಶ್ಯಕತೆ ಇರುವ ಸರಾಸರಿ ಕುಡಿಯುವ ನೀರಿನ ಪ್ರಮಾಣವೆಷ್ಟು; ಲಭ್ಯವಿರುವ ನೀರಿನ ಪ್ರಮಾಣವೆಷ್ಟು; ಪೂರೈಕೆ ಮಾಡುತ್ತಿರುವ ನೀರಿನ ಪ್ರಮಾಣವೆಷ್ಟು;	ಮುಧೋಳ ನಗರದ ಹಾಲಿ ಜನಸಂಖ್ಯೆಯು ಸುಮಾರು 59,000 ಇದ್ದು, ನಗರಕ್ಕೆ ದಿನಂಪ್ರತಿ ಸುಮಾರು 8.00 ದ.ಲೀ. ನೀರಿನ ಅವಶ್ಯಕತೆ ಇರುತ್ತದೆ. ಪ್ರಸ್ತುತ ಘಟಪ್ರಭಾ ನದಿಯಲ್ಲಿ ನೀರಿನ ಪ್ರಮಾಣ ವರ್ಷದಲ್ಲಿ 3 ರಿಂದ 4 ತಿಂಗಳು ಮಾತ್ರ ಲಭ್ಯವಿದ್ದು ಮತ್ತು ಬೇಸಿಗೆಯಲ್ಲಿ ಬೋರ್‌ವೆಲ್ ನೀರಿನ ಪ್ರಮಾಣ ಗಣನೀಯವಾಗಿ ಇಳಿಮುಖವಾಗುವುದರಿಂದ ಸುಮಾರು ದಿನಂಪ್ರತಿ 4.7 ದಶ ಲಕ್ಷ ಲೀಟರ್ ನೀರಿನ ಲಭ್ಯತೆ ಇರುತ್ತದೆ. ಪ್ರಸ್ತುತ ಮುಧೋಳ್ ನಗರದ ಹಾಲಿ ಜನ ಸಂಖ್ಯೆಗೆ ತಲಾ 70 ಲೀಟರ್ ನೀಡು ಸರಬರಾಜು ಮಾಡಲಾಗುತ್ತಿದೆ.

(ಈ)	ಶಾಶ್ವತ ಕುಡಿಯುವ ನೀರಿನ ಯೋಜನೆ ಬಗ್ಗೆ ಸರ್ಕಾರ ರೂಪಿಸಿರುವ ಕಾರ್ಯಕ್ರಮಗಳಾವುವು;	ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಬಾಗಲಕೋಟೆ ಜಿಲ್ಲೆಯ ಮುಧೋಳ ನಗರಕ್ಕೆ ರೂ.170.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಶಾಶ್ವತ ಕುಡಿಯುವ ನೀರು ಸರಬರಾಜು ಮಾಡಲು ಗುಳಬಾಳ ಬಳಿ ಕೃಷ್ಣಾ ನದಿ ಮೂಲದಿಂದ ಮತ್ತು ವೆಂಕಟೇಶ್ವರ ಜಲಸಂಗ್ರಹಾಗಾರ ಕೆರೆಗೆ ನೀರು ಸರಬರಾಜು ಒದಗಿಸಲು ಹಾಗೂ ನಗರದಲ್ಲಿ ವಿತರಣಾ ಜಾಲ ವ್ಯವಸ್ಥೆ ಅಳವಡಿಸುವ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಸಂಖ್ಯೆ ನಅಇ 53 ಯುಎಂಎಸ್ 2021

(ಬಿ.ಎ.ಬಸವರಾಜ)

ನಗರಾಭಿವೃದ್ಧಿ ಸಚಿವರು